# ನಿಮ್ಮೊಡನೆ

## ವಾಯುಮಾಲಿನ್ಯ ತಡೆಗಟ್ಟಿ, ನಗರಗಳನ್ನು ವಾಸಯೋಗ್ಯವಾಗಿಸಲು ಬೇಕು ಅಗತ್ಯ ಕ್ರಮ

**ವಾಯುಮಾಲಿನ್ಯದಿಂದಾಗಿ ದೆಹಲಿ ‘ಗ್ಯಾಸ್ ಚೇಂಬರ್’ ಆಗಿ ಪರಿವರ್ತನೆಯಾಗಿದೆ. ಉದ್ಯಾನನಗರಿ ಎಂಬ ಖ್ಯಾತಿ ಪಡೆದಿದ್ದ, ಹಿತಕರ ಹವೆಗೆ ಹೆಸರಾಗಿದ್ದ ಬೆಂಗಳೂರಿನ ಸ್ಥಿತಿ ಕೂಡ ದಿನೇ ದಿನೇ ಹದಗೆಡುತ್ತಿದೆ. ಬೆಂಗಳೂರಿನಲ್ಲಿ ಗಾಳಿಯ ಆರೋಗ್ಯ ಕೆಡಲು ವಾಹನಗಳು ಉಗುಳುವ ಹೊಗೆಯೇ ಪ್ರಮುಖ ಕಾರಣ.**

ವಾಯುಮಾಲಿನ್ಯ ಈಗ ಜಾಗತಿಕ ಸಮಸ್ಯೆಯಾಗಿ ಬೆಳೆದುನಿಂತಿದೆ. ವಿಶೇಷವಾಗಿ ನಗರ ಮತ್ತು ಪಟ್ಟಣ ನಿವಾಸಿಗಳ ನೆಮ್ಮದಿ ಕದಡಿದೆ, ಜನಸಮೂಹದ ಆರೋಗ್ಯಕ್ಕೆ ಸವಾಲಾಗಿ ಪರಿಣಮಿಸಿದೆ. ವಾಯುಮಾಲಿನ್ಯಕ್ಕೆ ಸಂಬಂಧಿಸಿದಂತೆ ಪ್ರತಿವರ್ಷ ಬಿಡುಗಡೆಯಾಗುತ್ತಿರುವ ವರದಿಗಳು ದಿಗಿಲು ಮೂಡಿಸುತ್ತಿವೆ ಮತ್ತು ಕಳವಳಕ್ಕೆ ಕಾರಣವಾಗುತ್ತಿವೆ.

‘ಐಕ್ಯೂಏರ್’ (IQAir) ಎಂಬುದು ಸ್ವಿಟ್ಜರ್‌ಲೆಂಡ್‌ನ ವಾಯು ಗುಣಮಟ್ಟ ತಂತ್ರಜ್ಞಾನ ಕಂಪನಿಯ ಹೆಸರು. ಈ ಕಂಪನಿಯು ವಾಯು ಗುಣಮಟ್ಟಕ್ಕೆ ಸಂಬಂಧಿಸಿದಂತೆ ದತ್ತಾಂಶ ಸಂಗ್ರಹಿಸಿ ಪ್ರತಿವರ್ಷ ವರದಿ ಬಿಡುಗಡೆ ಮಾಡುತ್ತದೆ. ಈ ಕಂಪನಿಯ ‘ದಿ ವರ್ಲ್ಡ್ ಏರ್ ಕ್ವಾಲಿಟಿ ರಿಪೋರ್ಟ್– 2024’ ಇತ್ತೀಚೆಗೆ ಬಿಡುಗಡೆಯಾಗಿದ್ದು, ದೇಶಗಳ ಶ್ರೇಯಾಂಕದಲ್ಲಿ ಭಾರತದ ಸ್ಥಾನ ಮತ್ತಷ್ಟು ದಿಗಿಲುಗೊಳಿಸುವಂತೆ ಇದೆ.

ಜಗತ್ತಿನಲ್ಲಿ ಅತಿಹೆಚ್ಚು ವಾಯುಮಾಲಿನ್ಯದಿಂದ ನಲುಗಿದ 20 ನಗರಗಳ ಪೈಕಿ 13 ನಗರಗಳು ಭಾರತದಲ್ಲಿಯೇ ಇವೆ ಎಂದು ಈ ವರದಿ ಗುರುತಿಸಿದೆ. ದೇಶಗಳ ರಾಜಧಾನಿಗಳ ಪೈಕಿ ದೆಹಲಿಗೇ ಈ ಸಲವೂ ಮಾಲಿನ್ಯದ ‘ಕಿರೀಟ’. ಮೇಘಾಲಯದ ಬರ್ನಿಹಾಟ್ ನಗರವು ಜಗತ್ತಿನಲ್ಲೇ ಅತಿಹೆಚ್ಚು ಮಾಲಿನ್ಯ ಹೊಂದಿರುವ ನಗರವಾಗಿ ಮಾರ್ಪಟ್ಟಿದೆ. ಅಂದರೆ ಮಾಲಿನ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಮೊದಲ ಸ್ಥಾನ ಪಡೆದಿದೆ ಈ ಕೈಗಾರಿಕಾ ನಗರ. ಈ ನಗರವು ಮೇಘಾಲಯ ಮತ್ತು ಅಸ್ಸಾಂನ ಗಡಿಯಲ್ಲಿದೆ.

ವರದಿಯಲ್ಲಿ ಉಲ್ಲೇಖವಾಗಿರುವ ಇನ್ನೂ ಹಲವು ಅಂಶಗಳು ಗಾಬರಿ ಮೂಡಿಸುವಂತಿವೆ. ಭಾರತದಲ್ಲಿ ಶೇ. 35ರಷ್ಟು ನಗರಗಳಲ್ಲಿ ಮಾಲಿನ್ಯಕಾರಕ ಕಣಗಳ ಪ್ರಮಾಣವು ಸುರಕ್ಷಿತ ಮಟ್ಟಕ್ಕಿಂತ 10 ಪಟ್ಟು ಹೆಚ್ಚು ಇದೆ. ಜಗತ್ತಿನ ಅತಿಹೆಚ್ಚು ಮಾಲಿನ್ಯಕಾರಕ 20 ನಗರಗಳ ಪೈಕಿ ಮೂರು ನಗರಗಳನ್ನು ಹೊರತುಪಡಿಸಿ ಉಳಿದ ಎಲ್ಲ ನಗರಗಳು ಭಾರತ ಇಲ್ಲವೇ ಪಾಕಿಸ್ತಾನದಲ್ಲಿ ಇವೆ ಎಂಬುದು ಗಮನಾರ್ಹ. ನಮ್ಮ ನಗರಗಳ ವಾಯು ಗುಣಮಟ್ಟ ಈ ಮಟ್ಟಿಗೆ ಕುಸಿತ ಕಂಡಿದೆ.

ಈ ಮಾಲಿನ್ಯವು ಜಗತ್ತಿನ ಎರಡನೇ ಅತಿ ದೊಡ್ಡ ಮಾರಕ ಸಮಸ್ಯೆಯಾಗಿದೆ ಎಂದು ತಜ್ಞರು ಎಚ್ಚರಿಸಿದ್ದಾರೆ. ಗಂಭೀರ ಸ್ವರೂಪದ ಹಲವು ಬಗೆಯ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಿದೆ. ವಾಯುಮಾಲಿನ್ಯದಿಂದಾಗಿ ಜಗತ್ತಿನಲ್ಲಿ ಪ್ರತಿವರ್ಷ ಲಕ್ಷಾಂತರ ಮಂದಿ ಸಾವನ್ನಪ್ಪುತ್ತಿದ್ದಾರೆ. ಉಸಿರಾಡಲು ಶುದ್ಧಗಾಳಿಯಿಲ್ಲದೆ ಭಾರತೀಯರ ಸರಾಸರಿ ಆಯಸ್ಸು 1.7 ವರ್ಷಗಳಷ್ಟು ಕಡಿಮೆಯಾಗಿದೆ ಎಂಬ ಕಳವಳಕಾರಿ ಅಂಶ ಸಮೀಕ್ಷೆಗಳಿಂದ ಹೊರಬಿದ್ದಿದೆ. ಅಂದರೆ ಪ್ರಾಣವಾಯು ಕೂಡ ನಂಜಾಗಿ ಪರಿಣಮಿಸಿದೆ!

ವಾಯುಮಾಲಿನ್ಯದಿಂದಾಗಿ ದೆಹಲಿಯು ‘ಗ್ಯಾಸ್ ಚೇಂಬರ್’ ಆಗಿ ಪರಿವರ್ತನೆಯಾಗಿದೆ. ಉದ್ಯಾನನಗರಿ ಎಂಬ ಖ್ಯಾತಿ ಪಡೆದಿದ್ದ, ಹಿತಕರ ಹವೆಗೆ ಹೆಸರಾಗಿದ್ದ ಬೆಂಗಳೂರಿನ ಸ್ಥಿತಿ ಕೂಡ ದಿನೇ ದಿನೇ ಹದಗೆಡುತ್ತಿದೆ. ಬೆಂಗಳೂರಿನಲ್ಲಿ ಗಾಳಿಯ ಆರೋಗ್ಯ ಕೆಡಲು ವಾಹನಗಳು ಉಗುಳುವ ಹೊಗೆಯೇ ಪ್ರಮುಖ ಕಾರಣ. ಮೆಟ್ರೊ–ರಸ್ತೆ ಕಾಮಗಾರಿಗಳು, ರಸ್ತೆಗಳ ಅಸಮರ್ಪಕ ನಿರ್ವಹಣೆ, ಕಟ್ಟಡ ನಿರ್ಮಾಣ ಚಟುವಟಿಕೆಗಳಂತಹ ಹಲವು ಕಾರಣಗಳಿಂದಾಗಿ ವಾಯು ಗುಣಮಟ್ಟ ಕುಸಿದಿದೆ.

ರಾಜ್ಯದ ಎರಡನೇ ಹಂತದ ನಗರಗಳಿಗೂ ವಾಯುಮಾಲಿನ್ಯದ ಬೇಗೆ ತಟ್ಟತೊಡಗಿದೆ. ಕರ್ನಾಟಕದ ಎರಡನೇ ಸ್ತರದ ನಗರಗಳಲ್ಲಿ ವಾಯುಮಾಲಿನ್ಯ ಪ್ರಮಾಣವು 2030ರ ಹೊತ್ತಿಗೆ ಶೇ. 40ರಷ್ಟು ಹೆಚ್ಚಳವಾಗಲಿದೆ ಎಂಬ ಎಚ್ಚರಿಕೆಯನ್ನು ವಿಜ್ಞಾನ, ತಂತ್ರಜ್ಞಾನ ಮತ್ತು ನೀತಿ ಅಧ್ಯಯನ ಕೇಂದ್ರವು (ಸಿಎಸ್‌ಟಿಇಪಿ) ನೀಡಿದೆ. ಆದರೆ ಮಾಲಿನ್ಯಕ್ಕೆ ಸಂಬಂಧಿಸಿದ ವರದಿ, ಎಚ್ಚರಿಕೆ ಹಾಗೂ ಕಳವಳಗಳು ನಮ್ಮ ಅಧಿಕಾರಸ್ಥರ ಕಣ್ಣು ತೆರೆಸಿಲ್ಲ, ನಿಗ್ರಹಕ್ಕೆ ಬೇಕಾದ ಕ್ರಮಗಳು ಕೃತಿಗೆ ಇಳಿದಿಲ್ಲ.

ನಗರ ಮತ್ತು ಪಟ್ಟಣಗಳಿಗೆ ಬದುಕು ಅರಸಿ ಬರುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಆದರೆ, ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಕಲ್ಪಿಸಲು ನಮ್ಮ ಆಡಳಿತ ವ್ಯವಸ್ಥೆಗೆ ಸಾಧ್ಯವಾಗುತ್ತಿಲ್ಲ. ನಗರ ಮತ್ತು ಪಟ್ಟಣಗಳನ್ನು ವಾಸಿಸಲು ಯೋಗ್ಯವಾದ ರೀತಿಯಲ್ಲಿ ಉಳಿಸಿಕೊಳ್ಳುವುದು ಈಗ ಸವಾಲಿನ ಕೆಲಸವಾಗಿದೆ. ನಗರ ಸ್ಥಳೀಯ ಸಂಸ್ಥೆಗಳು ಮತ್ತು ಸರ್ಕಾರ ಈ ಸವಾಲನ್ನು ಗಂಭೀರವಾಗಿ ಪರಿಗಣಿಸಬೇಕು. ತುರ್ತು ಕ್ರಮಗಳ ಜೊತೆಗೆ ದೀರ್ಘಾವಧಿ ಯೋಜನೆಗಳನ್ನು ರೂಪಿಸಿ, ಕಾಲಮಿತಿಯಲ್ಲಿ ಅವುಗಳನ್ನು ಪೂರ್ಣಗೊಳಿಸುವ ಬದ್ಧತೆ ತೋರಬೇಕಾಗಿದೆ. ಈ ದಿಸೆಯಲ್ಲಿ ಸಾರ್ವಜನಿಕರ ಸಹಭಾಗಿತ್ವವೂ ಪ್ರಮುಖ ಪಾತ್ರ ವಹಿಸಲಿದೆ. ದುರದೃಷ್ಟದ ವಿಷಯ ಏನೆಂದರೆ, ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸುವಂತಹ ಗುರುತರ ಹೊಣೆಗಾರಿಕೆಯನ್ನೂ ನಮ್ಮ ಸರ್ಕಾರಗಳು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂಬುದು ಕಳವಳದ ಸಂಗತಿ. ನಾಗರಿಕರು ಎಚ್ಚೆತ್ತುಕೊಂಡು, ನಗರಗಳನ್ನು ವಾಸಯೋಗ್ಯಗೊಳಿಸಲು ಬೇಕಾದ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು.

■ ಎನ್. ಉದಯಕುಮಾರ್



ಈಶ್ವರ್